


ಗೆಲುವಿನ ಸಂಭ್ರಮದಲ್ಲಿ ಭಾರತೀಯ ಕ್ರಿಕೆಟ್ ತಂಡ

## ಚುಟುಕು ಕ್ರಿಕೆಟ್

# ಭಾರತ ತ್ರಿವಿಕ್ರಮ

**ಐದೇ ಪಂದ್ಯಗಳಲ್ಲಿ ಆಡಿ ಭಾರತಕ್ಕೆ ಮತ್ತೆ ಟ್ವೆಂಟಿ–20 ಕ್ರಿಕೆಟ್‌ನಲ್ಲಿ ಚಾಂಪಿಯನ್ ಪಟ್ಟ ದಕ್ಕಿಸಿಕೊಟ್ಟ ಸಂಜು ಸ್ಯಾಮ್ಸನ್ ಬದುಕಿನ ಹಾದಿ ಈಗ ಸ್ಫೂರ್ತಿಪಠ್ಯ. ಕುಳ್ಳಗಿದ್ದರೂ ಲೀಲಾಜಾಲವಾಗಿ ಬೌಲರ್‌ಗಳನ್ನು ದಂಡಿಸುವ ಇಶಾನ್ ಕಿಶನ್, ಆಲ್‌ರೌಂಡರ್ ಹಾರ್ದಿಕ್ ಪಾಂಡ್ಯ, ದೊಡ್ಡ ಹೊಡೆತಗಳ ಮೋಡಿಗಾರ ಶಿವಂ ದುಬೆ, ಎಲ್ಲರಿಗಿಂತ ಮಿಗಿಲಾಗಿ ಸವ್ಯಸಾಚಿ ಜಸ್‌ಪ್ರೀತ್ ಬೂಮ್ರಾ ಭಾರತದ ಹೊಳೆವ ತಾರೆಗಳೇ ಹೌದು.**

■ **ವಿಶಾಖ ಎನ್.**

ಹನ್ನೊಂದು ವರ್ಷದ ಹುಡುಗ. ಕ್ರಿಕೆಟ್‌ಕಿಟ್‌ಬ್ಯಾಗ್‌ತೂಕ ಆತನಿಗಿಂತ ಹೆಚ್ಚೇ ಇತ್ತು. ತಿರುವನಂತಪುರದ ಹೊರವಲಯದಲ್ಲಿನ ಮೈದಾನಕ್ಕೆ ಹೋಗಿ ಅಭ್ಯಾಸ ಮಾಡುತ್ತಿದ್ದುದು. ಸೂರ್ಯ ಹುಟ್ಟುವ ಮೊದಲೇ ಮನೆ ಬಿಡಬೇಕಿತ್ತು. ಎರಡು ಬಸ್‌ಗಳನ್ನು ಬದಲಾಯಿಸಿ, ದೂರದ ವೈದ್ಯಕೀಯ ಕಾಲೇಜಿನ ಮೈದಾನ ತಲುಪುವಷ್ಟರಲ್ಲಿ 6 ಗಂಟೆ ಆಗಿರುತ್ತಿತ್ತು. ರಾತ್ರಿ ಸರಿಯಾಗಿ ನಿದ್ದೆ ಆಗಿಲ್ಲದಿದ್ದರೂ ಕ್ರಿಕೆಟ್ ಅಭ್ಯಾಸವನ್ನಂತೂ ತಪ್ಪಿಸುತ್ತಿರಲಿಲ್ಲ.

ಅಭ್ಯಾಸ ಮುಗಿದ ಮೇಲೆ ಮೂಲೆಯ ನಲ್ಲಿಯ ಕೆಳಗೆ ಕುಳಿತು ತಣ್ಣೀರು ಸ್ನಾನ ಮಾಡಬೇಕಿತ್ತು. ಬಟ್ಟೆ ಬದಲಾಯಿಸಲು ಅಲ್ಲಿ ಕೋಣೆ ಇರಲಿಲ್ಲ. ಒಂದು ಟವಲ್‌ಸುತ್ತಿಕೊಂಡು ಅಲ್ಲಿಯೇ ಯೂನಿಫಾಮ್ ಹಾಕಿಕೊಂಡು, ಸೀದಾ ಶಾಲೆಯ ಕಡೆಗೆ ಹೆಜ್ಜೆ ಹಾಕಬೇಕಿತ್ತು.

ತಾತ ಮೀನುಗಾರ. ಅವರನ್ನು ಗಮನಿಸಿದ ಹುಡುಗನಿಗೆ ಒಂದು ಪಾಠ ಮನಸ್ಸಿಗೆ ಹೊಕ್ಕಿತ್ತು. ಸಮುದ್ರದ ಅಲೆಗಳನ್ನು ನಿಯಂತ್ರಿಸುವುದು ಸಾಧ್ಯವಿಲ್ಲ. ಮೀನು ಗಾಳಕ್ಕೆ ಬಿದ್ದರೆ ಶುಭದಿನ. ಬೀಳದಿದ್ದರೆ ಬಂದ ದಾರಿಗೆ ಸುಂಕವಿಲ್ಲದಂತೆ ಸಾಗಬೇಕು. ತಾತನ ಅದೇ ಬದುಕು ಹುಡುಗನಿಗೂ ಸ್ಫೂರ್ತಿಯಾಯಿತು.

ಕೆಲವೊಮ್ಮೆ ತಂಡಗಳಿಗೆ ಆಡುವ ಅವಕಾಶ ಸಿಗುತ್ತಿತ್ತು. ಸಿಗದೇ ಇದ್ದಾಗ ಬೆಂಚು ಕಾಯಬೇಕಾಗುತ್ತಿತ್ತು. ಕನಸು ಎಟುಕಿತು ಎಂದು ಅನಿಸಿದಾಗಲೆಲ್ಲ, ಅದು ಇನ್ನಷ್ಟು ದೂರವಾಗುತ್ತಿತ್ತು.

